4. ಅಂದಾಜು ಪಟ್ಟಿ ತಯಾರಿಸಿದ ನಂತರ ಈ ವರ್ಷವೇ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲು ಪರಿಗಣಿಸಲಾಗುವುದು.

ಕೆ.ಯು.ಆರ್.ಡಿ.ಎಫ್.ಸಿ. ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 940(1053)

ಸದಸ್ಯರ ಹೆಸರು: ಶ್ರೀ ಹೆ.ಎನ್.ಳಿ ಜಬ್ಬಾರ್‌ಖಾನ್ ಹೈಯಾತ್ ಖಾನ್(ಹುಬ್ಬಳ್ಳಿ)

ಪ್ರಶ್ನೆ

1. ಕೆಯುಆರ್‌ಡಿಎಫ್‌ಸಿ ಯೋಜನೆಯಡಿಯಲ್ಲಿ ಬೆಂಗಳೂರು, ತುಮಕೂರು, ಚನ್ನಪಟ್ಟಣ, ಮಂಗಳೂರು, ರಾಮನಗರ, ಮೈಸೂರು ನಗರಗಳು ಒಳಪಟ್ಟಿರುತ್ತವೆ, ಆದರೆ, ಹುಬ್ಬಳ್ಳಿ-ಧಾರವಾಡ ಮಹಾನಗರ ಒಳಪಟ್ಟಿರುವುದಿಲ್ಲ ಕಾರಣವೇನು?

2. ಈ ಯೋಜನೆಯಡಿಯಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಒಳಪಡಿಸಲಿಕ್ಕೆ ಏನು ತೊಂದರೆಗಳಿವೆ?

3. ಈ ಯೋಜನೆಯಡಿಯಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಸೇರ್ಪಡಿಸುವುದು ಯಾವ ಸಾಲಿನಿಂದ?

4. ಇಲ್ಲವಾಗಲ್ಲಿ ಕಾರಣವೇನು?

ಉತ್ತರಿಸುವ ಸಚಿವರು: ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಉತ್ತರ

1. ಬೆಂಗಳೂರು ನಗರದ ಬೆಳವಣಿಗೆಯನ್ನು ವಿಕೇಂದ್ರೀಕರಣ ಮಾಡುವ ದೃಷ್ಟಿಯಿಂದ ಏಷಿಯಾ ಅಭಿವೃದ್ಧಿ ಬ್ಯಾಂಕಿನ ನೆರವಿನಡಿಯಲ್ಲಿ ಕರ್ನಾಟಕ ನಗರ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ ಮೈಸೂರು, ತುಮಕೂರು, ರಾಮನಗರ ಮತ್ತು ಚನ್ನಪಟ್ಟಣ ನಗರಗಳು ಒಳಗೊಂಡಿರುತ್ತದೆ.

ಮೇಲಿನ ಯೋಜನೆಯಲ್ಲಿ ಬೆಂಗಳೂರು ನಗರವು ಒಳಗೊಂಡಿರುವುದಿಲ್ಲ, ಆದರೆ, ಕೇಂದ್ರ ಸರ್ಕಾರವು ಪ್ರಾಯೋಜಿಸಿರುವ ಮೆಗಾಸಿಟಿ ಯೋಜನೆಯಡಿಯಲ್ಲಿ ಬೆಂಗಳೂರು

ನಗರದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.

ಏಷಿಯಾ ಅಭಿವೃದ್ಧಿ ಬ್ಯಾಂಕಿನ ನೆರವಿನೊಂದಿಗೆ ಕರಾವಳಿ ಮತ್ತು ಪರಿಸರ ನಿರ್ವಹಣಾ ಯೋಜನೆಯಡಿಯಲ್ಲಿ ಇತರೆ 9 ಪಟ್ಟಣಗಳೊಂದಿಗೆ ಮಂಗಳೂರು ನಗರವನ್ನೂ ಸಹಾ ಸೇರಿಸಿಕೊಳ್ಳಲಾಗಿದೆ.

ವಿಶ್ವ ಬ್ಯಾಂಕ್ ನೆರವಿನಡಿಯಲ್ಲಿರುವ ಕರ್ನಾಟಕ ನಗರ ನೀರು ನಿರ್ವಹಣಾ ಯೋಜನೆಯು ಇನ್ನೂ ಅಧ್ಯಯನದ ಹಂತದಲ್ಲಿದ್ದು, ಇದರಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರಗಳೂ ಒಳಗೊಂಡಿರುತ್ತದೆ.

2. ವಿವರಗಳನ್ನು ಮೇಲೆ ತಿಳಿಸಲಾಗಿದೆ.

3. ವಿಶ್ವ ಬ್ಯಾಂಕ್ ನೆರವಿನ ಕರ್ನಾಟಕ ನಗರ ನೀರು ನಿರ್ವಹಣಾ ರಾಜ್ಯ ಸರ್ಕಾರ ಮತ್ತು ವಿಶ್ವ ಬ್ಯಾಂಕ್‌ನ ಅನುಮೋದನೆ ದೊರೆತ ಕೂಡಲೇ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

4. ಉದ್ಭವಿಸುವುದಿಲ್ಲ

ಹುಬ್ಬಳ್ಳಿ ನಗರದಲ್ಲಿ ಮಾಡರ್ನ್ ಸ್ಲಾಟರ್ ಹೌಸ್.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 941(1055)

ಸದಸ್ಯರ ಹೆಸರು: ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯಾತ್ ಖಾನ್(ಹುಬ್ಬಳ್ಳಿ)

ಪ್ರಶ್ನೆ

ಅ) ಹುಬ್ಬಳ್ಳಿ ನಗರದಲ್ಲೊಂದು ಮಾಡರ್ನ್ ಸ್ಲಾಟರ್ ಹೌಸ್ ಕಟ್ಟುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದಕ್ಕಾಗಿ ಆಯ್ಕೆ ಮಾಡಿದ ಸ್ಥಳ ಯಾವುದು?

ಇ) ಈ ಕೆಲಸಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು? ಯಾವ ಸಾಲಿನಿಂದ ಈ ಕೆಲಸ ಪ್ರಾರಂಭ ಮಾಡಲಾಗುವುದು?

ಈ) ಇಲ್ಲವಾದಲ್ಲಿ ಕಾರಣವೇನು?